ಕೈಯಾಗ ಕೊಡಬೇಕಂತ ಮಾಡಿಯೇನು? ಆ ಕಡಿ ಕರಕೊಂಡಹೋಗಲಿಕ್ಕೆ ನಿನಗ ಹೆಂಗರ ಮನಸ್ಸು ಬರತೇತಿ.'

ಮಗ ಏನೂ ಉತ್ತರ ಹೇಳಲಿಲ್ಲ. ಮುದುಕಿ ಈಗ ಸೊಸೆಯ ಕಡೆ ತಿರುಗಿದಳು. ಮುಗ್ಧತೆ ಮತ್ತು ಆಲಸ್ಯದ ಪ್ರತೀಕದಂತಿದ್ದ ಸೊಸೆ ತನ್ನ ಸಣ್ಣ ಕೂಸಿಗೆ ಪ್ರೀತಿಯಿಂದ ಖರ್ಜೂರ ತಿನ್ನಿಸುತ್ತಿದ್ದಳು. 'ಅಲ್ಲss, ಮಕ್ಕಳು ಈಗಾಗಲೆ ಫ್ಲೋರಿಡಾ ನೋಡ್ಯಾರ. ನೋಡಿದ ಜಾಗಾ ಮತ್ತ ಮತ್ತ ನೋಡೋದ್ರಾಗ ಏನು ಖುಶಿ ಇರ್ತದ. ಹುಡುಗರು ಹೊಸ ಹೊಸ ಪ್ರದೇಶ ನೋಡಬೇಕು. ಟೆನ್ನೆಸಿ ಊರು ಮಜಾ ಅದ. ಅವರು ಅದನ್ನ ನೋಡಿಲ್ಲ. ಅಲ್ಲಿಗೆ ಹೋಗೋಣೇನು?' ಅತ್ತೆ ಒದರಿ ಮುಗಿಸಿದಳು. ಸೊಸೆ ಆ ಮಾತುಗಳಿಗೆ ಕಿವಿಗೊಡಲಿಲ್ಲ. ಅವ್ವ ಹೇಳಬೇಕಾಗಿದ್ದ ಉತ್ತರವನ್ನು ಜಾನ್ ವೆಸ್ಲೆ ಹೆಸರಿನ ಅವಳ ಎಂಟು ವರ್ಷದ ಮಗ ಹೇಳಿದ: "ಅಲ್ಲಬೇ ಅಜ್ಜಿ, ನಿನಗ ನಮ್ಮ ಜೋಡಿ ಫ್ಲೋರಿಡಾಕ್ಕ ಬರೋ ಮನಸಿಲ್ಲಂದ್ರ ಸುಮ್ಮನ ಮನ್ಯಾಗ ಇರು. ಅಲ್ಲಿ ಹೋಗಬ್ಯಾಡ್ರಿ, ಇಲ್ಲಿ ಹೋಗಬ್ಯಾಡ್ರಿ ಅಂತ ನಮ್ಮನ್ನ ಯಾಕ ಕಾಡಸ್ತಿ?"

ಜೂನ್ ಸ್ಟಾರ್ ಎನ್ನುವ ಅವನ ಪುಟ್ಟ ತಂಗಿ ಅಣ್ಣನ ಬೆಂಬಲಕ್ಕೆ ನಿಂತಳು: 'ಮನ್ಯಾಗ ಇದ್ದು ಮಹಾರಾಣಿ ಆಗಲೇನು ಅಂತಾಳ ಅಜ್ಜಿ, ಅಲ್ಲ ಅಜ್ಜಿ?'

ಅಜ್ಜಿ ಮೊಮ್ಮಗನ ಜೊತೆ ವಾದಕ್ಕೆ ನಿಂತಳು: 'ಅಲ್ಲೊ ನನ್ನ ಭಾಮಟ್ಯಾ, ಅಕಸ್ಮಾತ್ ಆ ಗೂಂಡಾ ಅಲ್ಲಿಗೆ ಬಂದು ನಿನ್ನ ಹಿಡಕೊಂಡ್ರ ಏನ ಮಾಡ್ತಿ ನೀನು?'

"ಅಜ್ಜಿ, ನನ್ನ ಏನಂತ ತಿಳಕೊಂಡಿ ನೀನು? ಆ ಢಾಕು ನನ್ನ ಎದುರಿಗೆ ಬರಲಿ ನೋಡೋಣು. ಅಂವನ್ನ ಪುಡಿಪುಡಿ ಮಾಡ್ತೇನಿ."

ಅಜ್ಜಿಯ ಮೇಲೆ ಸೇಡು ತೀರಿಸಿಕೊಳ್ಳಲು ಇದೇ ಸಕಾಲವೆಂದು ಭಾವಿಸಿದ ಪುಟ್ಟಿ ಹೇಳಿದಳು: "ಅಣ್ಣಾ, ನಾ ಬೇಕಾದ್ರ ಚಾಲೆಂಜ್ ಮಾಡ್ತೇನಿ, ಒಂದು ಕೋಟಿ ರೂಪಾಯಿ ಕೊಡ್ತೇವಿ, ಮನ್ಯಾಗ ಇರು ಅಂದ್ರೂ ಅಜ್ಜಿ ಮನ್ಯಾಗ ಇರಂಗಿಲ್ಲ. ಆಕೀ ಮನಸ್ಸು ಹೆಂಗಿರ್ತದ ಅಂದ್ರ ನಾವೆಲ್ಲಿ ಹೋಗ್ತೇವಿ, ಅಲ್ಲಿಗೆ ಬರಬೇಕು. ನಮ್ಮ ಪ್ರವಾಸ ಕಂಡ್ರ ಆಕಿಗಿ ಒಂಥರಾ ಹೊಟ್ಟಿಕಿಚ್ಚು..."

"ಆಯ್ತುವಾ, ಸೊಕ್ಕಿನ ಮೊಮ್ಮಗಳ, 'ನನ್ನ ತಲಿ ಬಾಚು, ನನಗ ಗುಂಗುರ ಕೂದಲಾ ಮಾಡು' ಅಂತ ನನ್ನ ಕಡೆ ಬಾ, ಆವಾಗ ಹೇಳ್ತೇನಿ ನಿನಗ."

"ಓಹೋ, ಅಜ್ಜಿ ಏನೇನೋ ಸುಳ್ಳು ಹೇಳ್ತಾಳ. ಹುಟ್ಟಿದಾಗಿಂದನss ನನಗ ಗುಂಗುರ ಕೂದಲು ಅದಾವು. ಎಷ್ಟ ಚೆಂದ ಅದೀ ಅಂತ ಮಂದಿ ನನಗ ಹೇಳೇ ಹೇಳ್ತಾರು. ಗೊತ್ತೈತೇನು?"

ಮರುದಿನ ಮುಂಜಾನೆ ಕಾರಿನಲ್ಲಿ ಮೊದಲು ಬಂದು ಕುಳಿತವಳೆಂದರೆ ಅಜ್ಜಿಯೇ. ಜೊತೆಗೆ ಹಿಪ್ಪೊಪೊಟೋಮಸ್‌ನಂತೆ ಕಾಣುತ್ತಿದ್ದ ಅವಳ ಒಂದು ದೊಡ್ಡ ಬ್ಯಾಗ್. ಅದರೊಳಗೆ ಒಂದು ಬಾಸ್ಕೆಟ್‌ನಲ್ಲಿ ತನ್ನ ಪ್ರೀತಿಯ ಬೆಕ್ಕನ್ನು ಬೇರೆ ತಂದಿದ್ದಳು. ಮೂರು ದಿನಗಳವರೆಗೆ ಬೆಕ್ಕು ಅವಳನ್ನು ಬಿಟ್ಟಿರುವುದಿಲ್ಲವಂತೆ. ಅಕಸ್ಮಾತ್ ಗ್ಯಾಸ್ ಸ್ಟೌ ಹತ್ತಿರ ಹೋಗಿ ಬೆಂಕಿ ಹಚ್ಚಿಕೊಂಡರೆ ಏನು ಗತಿ ಎಂದು ಜೊತೆಗೆ ತಂದಳು. ಮಗನಿಗೆ ಮಾತ್ರ ಬೆಕ್ಕು ಕಂಡರೆ ಆಗದು. ಅದನ್ನು ಕರೆದುಕೊಂಡು ಹೋಟೆಲಿಗೆ ಹೋಗುವುದೆ! ಈ ಮುದುಕಿಯನ್ನು ಕರೆದುಕೊಂಡು ಹೊರಟರೆ ಹೀಗೆಯೇ! ಆತ ದುಃಖಿತನಾಗಿದ್ದ. ಮುದುಕಿ ಹಿಂದಿನ ಸೀಟಿನಲ್ಲಿ ಮಹಾರಾಣಿಯ ಹಾಗೆ ಕುಳಿತಳು. ಮೊಮ್ಮಗ ಜಾನ್ ವೆಸ್ಲೆ ಮತ್ತು ಮೊಮ್ಮಗಳು ಜೂನ್ ಸ್ಟಾರ್ ಅವಳ ಆ ಕಡೆ, ಈ ಕಡೆ ಕೂತರು. ಬೇಲಿ ಡ್ರೈವ್ ಮಾಡುತ್ತಿದ್ದರೆ ಅವನ ಹೆಂಡತಿ ಅವನ ಜೊತೆ ಮುಂದಿನ ಸೀಟಿನಲ್ಲಿ ತನ್ನ ಮೊಲೆ ಕುಡಿಯುವ ಕೂಸಿನೊಂದಿಗೆ ಕುಳಿತಿದ್ದಳು. ಕೊನೆಗೂ ಅಜ್ಜಿಯ ಹಟವೇ ಗೆದ್ದಿತ್ತು. ಟೆನ್ನೆಸಿಗೆ ಹೋಗುವುದೆಂದು ನಿರ್ಧಾರವಾಗಿ ಮುಂಜಾನೆ ಎಂಟು ನಲವತ್ತೈದಕ್ಕೆ ಅಟ್ಲಾಂಟಾದಲ್ಲಿರುವ ತಮ್ಮ ಮನೆಯನ್ನು ಬಿಟ್ಟರು. ಮುದುಕಿ ತನ್ನ ಕೈಗವಸುಗಳನ್ನು ತೆಗೆದು ಪರ್ಸಿನಲ್ಲಿಟ್ಟಳು. ಅವಳ ಅಂದವಾದ ಹ್ಯಾಟ್, ಬಿಳಿ ಚುಕ್ಕಿಗಳಿರುವ